

# ಬಲಾಢ್ಯ ಹರ್ಕ್ಯುಲಸ್!



ನೀವು ಅದೆಷ್ಟೋ ಪೈಲ್ವಾನರನ್ನು ನೋಡಿರಬಹುದು, ಆದರೆ ಇಷ್ಟು ಭಾರೀ ಗಾತ್ರದ ಆಸಾಮಿಯನ್ನು ಬಹುಶಃ ನೋಡಿರಲಿಕ್ಕಿಲ್ಲ. ಇಡೀ ಪ್ರಪಂಚವನ್ನೇ ಹರಿದು ಇಬ್ಭಾಗ ಮಾಡುವನೇನೋ ಎಂಬಂತೆ ತೋರುವ ಈ ದೈತ್ಯನ ಹೆಸರು ಸಾಜದ್ ಘಾರಿಬಿ. ವೈಟ್ ಲಿಫ್ಟರ್ ಆಗಿರುವ ಈತನ ವಯಸ್ಸು ಬರೀ 24 ವರ್ಷ. ತೂಕ ಎಷ್ಟಿರಬಹುದು ಗೊತ್ತೇ? ಬರೋಬ್ಬರಿ 175 ಕಿಲೋಗ್ರಾಂ ಗಳು!!

ಇತ್ತೀಚೆಗೆ ಘಾರಿಬಿ ಯು ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಸಂಚಲನವನ್ನುಂಟು ಮಾಡಿದ್ದಾನೆ. ಇಂಟರ್ ನೆಟ್ ನಲ್ಲಿ ಈತನ ಆಕಾರವನ್ನು ನೋಡಿದ ಬಹಳಷ್ಟು ಮಂದಿ ದೇಹ ದಾರ್ಢ್ಯವನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರಂತೆ. ಈತನ ಇನ್ಸ್ಟಾಗ್ರಾಮ್ ಅಕೌಂಟ್ ನಲ್ಲಿ 67,000 ಕ್ಕೂ ಹೆಚ್ಚು ಹಿಂಬಾಲಕರಿದ್ದಾರಂತೆ! ಅವರೆಲ್ಲಾ ಈತನಿಗೆ ಮರುಳಾಗಿ ಪರ್ಶಿಯನ್ ಹರ್ಕ್ಯುಲಸ್ ಮತ್ತು ಇರಾನಿ ಹಲ್ಕ್ ಎಂದು ಹೆಸರಿಟ್ಟಿದ್ದಾರಂತೆ. ತನ್ನ ದೇಶದ ಪ್ರತಿನಿಧಿಯಾಗಿ ಪವರ್ ಲಿಫ್ಟಿಂಗ್ ಹಾಗೂ ಬಾಡಿ ಬಿಲ್ಡಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾನೆ. ಈತನ ಬಗ್ಗೆ ಹೆಚ್ಚೇನೂ ತಿಳಿದಿಲ್ಲವಾದರೂ ಭಾರ ಎತ್ತುವುದು ಹಾಗೂ ಬಿಡುವಿನ ವೇಳೆಯಲ್ಲಿ ತನ್ನ ದಿನಚರಿಯ ಫೋಟೋಗಳನ್ನು ಪೋಸ್ಟ್ ಮಾಡುವುದು ಈತನಿಗೆ ಬಲು ಪ್ರಿಯವಂತೆ!

■ ವಿದ್ಯಾ ವಿ. ಹಾಲಭಾವಿ